

# ಪ್ರಥಮಭಾಷೆ-ಕನ್ನಡ

## 8ನೇ ತರಗತಿ




********************************** ಪಾಠಯೋಜನೆ **********************************






ಪರಿಕಲ್ಪನೆ ಮತ್ತು ರಚನೆ

************************************************************************************************************

ಬಸವರಾಜ.ಟಿ.ಎಂ

ಕನ್ನಡ ಭಾಷಾ ಶಿಕ್ಷಕರು

ಸರ್ಕಾರಿ ಪ್ರೌಢಶಾಲೆ,ರೂಪನಗುಡಿ



ಬಳ್ಳಾರಿ ಪೂರ್ವ ವಲಯ

# ಪ್ರಥಮಭಾಷೆ–ಕನ್ನಡ

## 8ನೇ ತರಗತಿ




********************************* **ಪಾಠಯೋಜನೆ** *********************************

ವಿಷಯ : ಪ್ರಥಮ ಭಾಷೆ ಕನ್ನಡ

## ಪಾಠ ಯೋಜನೆ

ತರಗತಿ : 8

**ಪಾಠದ ಶೀರ್ಷಿಕೆ : ಮಗ್ಗದ ಸಾಹೇಬ (ಗದ್ಯ)**

ಬೋಧನೆಯ ಉದ್ದೇಶಗಳು : 1) ಕಥಾ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸುವುದು
2) ಔದ್ಯೋಗಿಕ ಶಿಕ್ಷಣದ ಬಗ್ಗೆ ಒಲವು ಮೂಡಿಸುವುದು
3) ಧಾರ್ಮಿಕ ಸಹಿಷ್ಣುತೆಯನ್ನು ಬೆಳೆಸುವುದು.

ಕಲಿಕಾ ಸಾಮಗ್ರಿಗಳು : ಕವಿ,ಕಾವ್ಯ ಪರಿಚಯದ ಚಾರ್ಟ್, ಪ್ರಶ್ನಾವಳಿ ಕಾರ್ಡುಗಳು, ಗುಡಿಕೈಗಾರಿಕೆಗಳ ಚಿತ್ರಗಳು

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಓದುವುದು | **ಪ್ರೇರಣಾ ಚಟುವಟಿಕೆ:**<br><br>ವಿದ್ಯಾರ್ಥಿಗಳಿಗೆ ತಮ್ಮ ಸುತ್ತಮುತ್ತ ಸ್ವಂತ ಉದ್ಯೋಗಳನ್ನು ಮಾಡುವವರನ್ನು ಹೆಸರಿಸುತ್ತಾ ಅವರು ಮಾಡುವ ಉದ್ಯೋಗಳನ್ನು ಕಪ್ಪು ಹಲಗೆ ಮೇಲೆ ಬರೆಸುವುದು,ಓದಿಸುವುದು (ಹೈನುಗಾರಿಕೆ,ಗಾರೆ ಕೆಲಸ,ಕಸೂತಿ,ಕೃಷಿ, ಮಗ್ಗದಲ್ಲಿ ಕಂಬಳಿ,ಬಟ್ಟೆ ನೇಯುವುದು ಇತ್ಯಾದಿ) ಗುಡಿಕೈಗಾರಿಕೆಗಳ ಚಿತ್ರಗಳನ್ನು ಗುರುತಿಸುವುದು | ಅವಲೋಕನ | ತಪಶೀಲು ಪಟ್ಟಿ | 1) ವಿದ್ಯಾರ್ಥಿಗಳು ಗುಡಿಕೈಗಾರಿಕೆಗಳನ್ನು ಹೆಸರಿಸಿದರೆ ?<br>2) ವಿದ್ಯಾರ್ಥಿಗಳು ಗುಡಿಕೈಗಾರಿಕೆಗಳನ್ನು ಕಪ್ಪು ಹಲಗೆ ಮೇಲೆ ಬರೆದರೆ ?<br>3) ಕಪ್ಪು ಹಲಗೆ ಮೇಲೆ ಬರೆದ ಗುಡಿಕೈಗಾರಿಕೆಗಳ ಹೆಸರರುಗಳನ್ನು ಓದಿದರೆ ?<br>4) ಚಿತ್ರದಲ್ಲಿರುವ ಗುಡಿಕೈಗಾರಿಕೆಗಳ ಹೆಸರನ್ನು ತಿಳಿಸಿದರೆ ?<br>5) ಮಗ್ಗದಿಂದ ಬಟ್ಟೆನೇಯುವ ವಿಚಾರ ತಿಳಿದಿದಿಯೆ ? |

| | | | | | |
|---|---|---|---|---|---|
| | ಅಭಿವ್ಯಕ್ತಿ<br>ಆಲಿಸುವುದು | ಪಾಠ ಪ್ರಕ್ರಿಯೆಗಳು<br><br>ಗದ್ಯಭಾಗವನ್ನು ಸ್ವರಭಾರದೊಂದಿಗೆ ವಾಚಿಸುವುದು.<br>ವಿದ್ಯಾರ್ಥಿಗಳಿಂದ ಗಟ್ಟಿವಾಚನ ಮಾಡಿಸುವುದು<br>ವಿದ್ಯಾಥಿಗಳಿಗೆ ಮೌನವಾಗಿ ಓದುವಂತೆ ತಿಳಿಸುವುದು.<br>ಓದುವಿನ ಮೌಲ್ಯಮಾಪನಕ್ಕಾಗಿ ಕೆಲವು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುತ್ತ ಉತ್ತರಿಸುತ್ತ ಗದ್ಯಭಾಗವನ್ನು ಅರ್ಥೈಸುವುದು | ಅವಲೋಕನ | ತಪಶೀಲು ಪಟ್ಟಿ | 1.ಶಿಕ್ಷಕರ ವಾಚನವನ್ನು ವಿದ್ಯಾರ್ಥಿಗಳು ಆಸಕ್ತಿಯಿಂದ ಆಲಿಸಿದರೇ?<br>2.ವಿದ್ಯಾರ್ಥಿಗಳು ಗದ್ಯಭಾಗವನ್ನು ಗಟ್ಟಿಯಾಗಿ ಸ್ವರಭಾರ ದೊಂದಿಗೆ ಓದಿದರೇ?<br>3.ವಿದ್ಯಾರ್ಥಿಗಳು ಆಸಕ್ತಿಯಿಂದ ಮೌನವಾಗಿ ಓದಿದರೇ?<br>4.ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರೇ?<br>5. ಮಗ್ಗದ ಸಾಹೇಬ ಕತೆಯನ್ನು ತಮ್ಮ ವಾಕ್ಯಗಳಲ್ಲಿ ಹೇಳಿದರೇ ? |

ವಿಷಯ : ಪ್ರಥಮ ಭಾಷೆ ಕನ್ನಡ

## ಪಾಠ ಯೋಜನೆ

ತರಗತಿ : 8

**ಪಾಠದ ಶೀರ್ಷಿಕೆ : ಕನ್ನಡಿಗರ ತಾಯಿ(ಪದ್ಯ)**

ಬೋಧನೆಯ ಉದ್ದೇಶಗಳು : 1. ಕನ್ನಡ ನಾಡು ನುಡಿಯ ಬಗ್ಗೆ ಅಭಿಮಾನ ಮೂಡಿಸುವುದು
2. ಕನ್ನಡನಾಡಿನ ಕವಿಗಳು,ಕಲೆ,ಭಾಷೆ,ಸಾಹಿತ್ಯ,ಇತಿಹಾಸ ಪ್ರಕೃತಿಯನ್ನು ಪ್ರಶಂಸಿಸುವಂತೆ ಮಾಡುವುದು

ಕಲಿಕಾ ಸಾಮಗ್ರಿಗಳು : ಕವಿ,ಕಾವ್ಯ ಪರಿಚಯದ ಚಾರ್ಟ್, ಪ್ರಶ್ನಾವಳಿ ಕಾರ್ಡುಗಳು, ಕನ್ನಡ ಗೀತೆಗಳ ಆಡಿಯೋ

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಅಭಿವ್ಯಕ್ತಿಸುವುದು | ಪ್ರೇರಣಾ ಚಟುವಟಿಕೆ:<br>ವಿದ್ಯಾರ್ಥಿಗಳಿಂದ ' ಭಾರತ ಜನನಿಯ ತನುಜಾತೆ' ಗೀತೆಯನ್ನು ಹಾಡಿಸುವುದು<br>ಕನ್ನಡನಾಡಿನ ವರ್ಣನೆಯ ಬಗ್ಗೆ ಇರುವ ಗೀತೆಗಳನ್ನು ಹಾಡಿಸುವುದು ಚಿಕ್ಕ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು<br>ಕನ್ನಡನಾಡಿನ ವರ್ಣನೆಯ ಗೀತೆಗಳನ್ನು ಕೇಳಿಸುವುದು | ಅವಲೋಕನ | ತಪಶೀಲು ಪಟ್ಟಿ | 1. ವಿದ್ಯಾರ್ಥಿಗಳು ಗೀತೆವನ್ನು ಸಾಮೂಹಿಕವಾಗಿ ಹಾಡಿದರೇ<br>2. ವಿದ್ಯಾರ್ಥಿಗಳು ಗೀತೆವನ್ನು ರಾಗವಾಗಿ ಹಾಡಿದರೇ<br>3. ಕನ್ನಡನಾಡಿನ ವರ್ಣನೆಯ ಬಗ್ಗೆ ಇರುವ ಗೀತೆಗಳನ್ನು ಹಾಡಿದರೇ ?<br>4. ಕನ್ನಡ ಗೀತೆಗಳ ಆಡಿಯೋವನ್ನು ಆಸಕ್ತಿಯಿಂದ ಆಲಿಸಿದರೇ ?<br>5..ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸದರೇ ? |

| | | | | | |
|---|---|---|---|---|---|
| | ಆಲಿಸುವುದು ಮತ್ತು ಮೌಖಿಕ ಅಭಿವ್ಯಕ್ತಿ | ಪದ್ಯಪಾಠ ಪ್ರಕ್ರಿಯೆಗಳು<br>ಕವಿ ಪರಿಚಯ ಮಾಡಿಸುವುದರೊಂದಿಗೆ ಹಾಡನ್ನು ರಾಗಬದ್ಧವಾಗಿ,ಗಟ್ಟಿಯಾಗಿ, ಹಾಡುವುದು. ವಿದ್ಯಾರ್ಥಿಗಳಿಂದ ಹಾಡಿಸುವುದು.ಅರ್ಥೈಸುವುದು ಕನ್ನಡದ ಕವಿ,ಕಲೆ,ಸಾಹಿತ್ಯದ ಬಗ್ಗೆ ಚರ್ಚಿಸುವುದು | ಅವಲೋಕನ | ತಪಶೀಲುಪಟ್ಟಿ | 1.ವಿದ್ಯಾರ್ಥಿಗಳು ಪದ್ಯವನ್ನು ಆಸಕ್ತಿಯಿಂದ ಆಲಿಸಿದರೇ?<br>2.ವಿದ್ಯಾರ್ಥಿಗಳು ಗಟ್ಟಿಯಾಗಿ ಹಾಡಿದರೇ?<br>3.ಪದ್ಯವನ್ನು ರಾಗಬದ್ದವಾಗಿ ಹಾಡಿದರೇ?<br>4.ಸಾಮೂಹಿಕವಾಗಿ ಆಸಕ್ತಿಯಿಂದ ಹಾಡಿದರೇ?<br>5.ಶಿಕ್ಷಕರ ಪ್ರಶ್ನೆಗಳಿಗೆ ಉತ್ತರಿಸಿದರೇ?<br>6. ಕನ್ನಡ ಕವಿಗಳ ಹೆಸರುಗಳನ್ನು ಪಟ್ಟಿ ಮಾಡಿದರೇ ?<br>7.ಪ್ರಾಸಪದಗಳ ಪಟ್ಟಿ ಮಾಡಿದರೇ ?<br>8. ಆಯ್ದಭಾಗವನ್ನು ಕಂಠಪಾಠ ಮಾಡಿ ಹೇಳಿದರೇ ? |
| | ಬರವಣಿಗೆ | ನಿಯೋಜಿತ ಕಾರ್ಯ<br>ಜ್ಞಾನಪೀಠ ಪುರಸ್ಕೃತ ಕನ್ನಡಿಗರ ಚಿತ್ರ ಸಂಗ್ರಹಿಸಿ ಯಾರಾದರೂ ಒಬ್ಬರ ಬಗ್ಗೆ ಟಿಪ್ಪಣಿ ಬರೆಯಿರಿ | ಅವಲೋಕನ | ದರ್ಜಾಮಾಪನಿ | 1. ಜ್ಞಾನಪೀಠ ಪುರಸ್ಕೃತ ಕನ್ನಡಿಗರ ಚಿತ್ರ ಸಂಗ್ರಹಿಸಿ ಸುಂದರವಾದ ಬರವಣಿಗೆಯಲ್ಲಿ ಆರ್ಕಷಕವಾಗಿ ಬರೆಯುವುದು–5<br>2.ಚಿತ್ರ ಸಂಗ್ರಹಿಸಿ ಸಾಧಾರಣವಾಗಿ ಬರೆಯುವುದು–4<br>3.ಚಿತ್ರ ಸಂಗ್ರಹಿಸಿರುವುದು –3<br>4.ಬರೆದಿಲ್ಲದಿರುವುದು–0 |

ಪಾಠದ ಶೀರ್ಷಿಕೆ : ಪರಿಸರ ಸಮತೋಲನ (ಗದ್ಯ)

ಬೋಧನೆಯ ಉದ್ದೇಶಗಳು : 1.ಪರಿಸರ ಸಂರಕ್ಷಣೆ, ಸಮತೋಲನದ ಬಗೆ ಅರಿವು ಮೂಡಿಸುವುದು.
2.ವನ್ಯಜೀವಿಗಳ ಮಹತ್ವವನ್ನು ಅರಿಯುವುದು
3.ಸರ್ಕಾರದ ವನ್ಯಜೀವಿ ಸಂರಕ್ಷಣಾ ಕಾರ್ಯಗಳನ್ನು ತಿಳಿದುಕೊಳ್ಳುವುದು.

ಕಲಿಕಾ ಸಾಮಗ್ರಿಗಳು : ಕವಿ,ಕಾವ್ಯ ಪರಿಚಯದ ಚಾರ್ಟ್, ಪ್ರಶ್ನಾವಳಿ ಕಾರ್ಡುಗಳು,ಆಕಾರ ಗ್ರಂಥ ವನ್ಯಜೀವಿಗಳ,ಸಸ್ಯಗಳ ಚಿತ್ರಗಳು

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಅಭಿವ್ಯಕ್ತಿಸುವುದು | ಪ್ರೇರಣಾ ಚಟುವಟಿಕೆ:<br>‘ ಹುಲಿ ಮತ್ತು ದನ ’ ಕತೆಯನ್ನು ಹೇಳುವುದು (ಕಾಡಿನಲ್ಲಿ ಜಾಸ್ತಿ ಹುಲಿಗಳು ಅವುಗಳು ದನಗಳನ್ನು ತಿನ್ನುವುದು,ರಾಜನ ಬಳಿ ದೂರು ,ಹುಲಿ ಹನನ , ದನಗಳೆಲ್ಲ ಕಾಡುನಾಶ ಮಳೆಇಲ್ಲ ರಾಜನ ಬಳಿ ದೂರು ,ಮಂತ್ರಿ ಯೋಜನೆ ಬೇರೆ ಕಾಡಿನಿಂದ ಹುಲಿತಂದು ಬಿಡುವುದು ಪುನ ಕಾಡು ಬೆಳೆದು ಹಸಿರಾಗುವುದು ಜನಸುಖಿ ) | ಅವಲೋಕನ | ತಪಶೀಲು ಪಟ್ಟಿ<br><br>ಪ್ರಶ್ನಾಕೋಶ | 1.ಕತೆಯನ್ನು ಆಸಕ್ತಿಯಿಂದ ಆಲಿಸಿದರೇ ?<br>2.ಶಿಕ್ಷಕರ ಪ್ರಶ್ನೆಗೆ ಉತ್ತರಿಸಿದರೇ ?<br>3.ವನ್ಯಜೀವಿಗಳು ವನ್ಯದಲ್ಲಿರಬೇಕು ಎಂಬುದನ್ನು ಗ್ರಹಿಸಿಕೊಂಡರೇ ? |

| | | | | | |
|---|---|---|---|---|---|
| | ಆಲಿಸುವುದು ಮತ್ತು ಅಭಿವ್ಯಕ್ತಿಸುವುದು | ಪಾಠ ಪ್ರಕ್ರಿಯೆಗಳು<br>ಸೂಕ್ತವಾದ ಸ್ವರಭಾರದೊಂದಿಗೆ ಪಠ್ಯ ಭಾಗವನ್ನು ಓದುವುದು ಮತ್ತು ವಿದ್ಯಾರ್ಥಿಗಳಿಂದ ಗಟ್ಟಿಯಾಗಿ ಓದಿಸುವುದು ಮೌನವಾಚನ ಮಾಡಿಸುವುದು. ಪ್ರಶ್ನೋತ್ತರ ವಿಧಾನದ ಮೂಲಕ ಚರ್ಚಿಸುವುದು. ವನ್ಯಜೀವಿಗಳ,ಸಸ್ಯಗಳ, ಹೆಸರುಗಳನ್ನು ಪಟ್ಟಿ ಮಾಡಿಸುವುದು ಪರಿಸರ ಸಮತೋಲನದ ಬಗ್ಗೆ ಚರ್ಚಾ ಸ್ಪರ್ಧೆ ಮಾಡುವುದು. | ಅವಲೋಕನ | ತಪಶೀಲು ಪಟ್ಟಿ | 1.ಶಿಕ್ಷಕರ ವಾಚನವನ್ನು ವಿದ್ಯಾರ್ಥಿಗಳು ಆಸಕ್ತಿಯಿಂದ ಆಲಿಸಿದರೇ?<br>2.ವಿದ್ಯಾರ್ಥಿಗಳು ಸೂಕ್ತವಾದ ಸ್ವರಭಾರದೊಂದಿಗೆ ಗಟ್ಟಿಯಾಗಿ ಓದಿದರೇ?<br>3.ಮೌನ ಓದಿನಲ್ಲಿ ಆಸಕ್ತಿ ವಹಿಸಿದರೇ?<br>4.ಮೌನವಾಚನದ ನಂತರ ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರೇ?<br>5.ಪ್ರಶ್ನೋತ್ತರ ಚರ್ಚೆಯಲ್ಲಿ ಭಾಗವಹಿಸಿದರೇ?<br>6. ವನ್ಯಜೀವಿಗಳ ಪಟ್ಟಿ ಮಾಡಿದರೇ ?<br>7. ವನ್ಯಜೀವಿಗಳ ಉಪಯೋಗ,ಅನುಪಯೋಗಗಳ ಬಗ್ಗೆ ಚರ್ಚಿಸಿದರೇ |
| | ಮಾತನಾಡುವುದು | ಚಟುವಟಿಕೆ:ಚರ್ಚಾಸ್ಪರ್ಧೆ<br>ವಿಷಯ : ವನ್ಯಜೀವಿಗಳು ಪರಿಸರಕ್ಕೆ ಪೂರಕವೇ? ಅಥವಾ ಮಾರಕವೇ ? | ವೀಕ್ಷಣೆ | ತಪಶೀಲುಪಟ್ಟಿ | 1.ಚರ್ಚೆಯಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿದರೇ 2.ವನ್ಯಜೀವಿಗಳ ಉಪಯೋಗ,ಅನುಪಯೋಗಗಳ ಬಗ್ಗೆ ಚರ್ಚಿಸಿದರೇ ?<br>3. ವನ್ಯಜೀವಿಗಳ ಸಂರಕ್ಷಣೆಗೆ ಸರ್ಕಾರದ ಕ್ರಮಗಳನ್ನು ತಿಳಿಸಿದರೇ ?<br>4.ಆಹಾರ ಸರಪಳಿ ಬಗ್ಗೆ ಚರ್ಚಿಸಿದರೇ? |
| | ಬರವಣಿಗೆ | ನಿಯೋಜಿತ ಕಾರ್ಯ<br>ಒಂದು ಪ್ರಾಣಿ ಚಿತ್ರ ಸಂಗ್ರಹಿಸಿ ಅದರ ಬಗ್ಗೆ ಟಿಪ್ಪಣಿ ಬರೆಯಿರಿ | ಅವಲೋಕನ | ದರ್ಜಾಮಾಪನ | 1.ಅತ್ಯುತ್ತಮ –5<br>2.ಉತ್ತಮ–4<br>3.ಸಾಧಾರಣ–3<br>4.ಬರೆದಿಲ್ಲ–0 |

ಪಾಠದ ಶೀರ್ಷಿಕೆ : ಭಾರತೀಯತೆ(ಪದ್ಯ)

ಬೋಧನೆಯ ಉದ್ದೇಶಗಳು 1.ದೇಶಭಕ್ತಿ,ತ್ಯಾಗ,ಪರೋಪಕಾರ ಬುದ್ಧಿ,ಏಕಾತಭಾವ ಮುಂತಾದ ಗೂಣಗಳನ್ನು ಬೆಳೆಸುವುದು
2.ದೇಶದ ಸಂಸ್ಕೃತಿ,ಇತಿಹಾಸ, ಪ್ರಾಕೃತಿಕ ಸೌಂದ್ಯರ್ಯವನ್ನು ಅರಿಯುವುದು.

ಕಲಿಕಾ ಸಾಮಗ್ರಿಗಳು : ಕವಿ ಕೆ.ಎಸ್,ನರಸಿಂಹಸ್ವಾಮಿಯವರ ಪರಿಚಯದ ಚಾರ್ಟು, ಪ್ರಶ್ನಾವಳಿ ಕಾರ್ಡುಗಳು, ಭಾರತದ ಭೂಪಟ,ದೇಶಭಕ್ತಿ ಗೀತೆಗಳ ಆಡಿಯೋ, ಪುಸ್ತಕಗಳು ಸೈನಿಕರ ಚಿತ್ರಗಳು

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಓದುವುದು | ಪ್ರೇರಣಾ ಚಟುವಟಿಕೆ:<br>ಬಿ.ಎ.ಸನದಿಯವರ 'ನಮ್ಮ ಬಲ'ದೇಶಭಕ್ತಿಗೀತೆ ಯನ್ನು ಹಾಡುವುದು, ದೇಶಭಕ್ತಿಗೀತೆಗಳ ಆಡಿಯೋವನ್ನು ಕೇಳಿಸುವುದು,ವಿದ್ಯಾರ್ಥಿಗಳಿಂದ ಹಾಡಿಸುವುದು | ಅವಲೋಕನ | ತಪಶೀಲು ಪಟ್ಟಿ | 1.ವಿದ್ಯಾರ್ಥಿಗಳು ದೇಶಭಕ್ತಿಗೀತೆಯನ್ನು ಆಸಕ್ತಿಯಿಂದ ಆಲಿಸಿದರೇ ?<br>2.ಆಲಿಸಿದ ದೇಶಭಕ್ತಿಗೀತೆಯ ರಚನಾಕಾರರನ್ನು ಹೆಸರಿಸಿದರೇ ?<br>3.ದೇಶಭಕ್ತಿಗೀತೆಯನ್ನು ಸಾಮೂಹಿಕವಾಗಿ ರಾಗವಾಗಿ ಹಾಡಿದರೇ ? |
| | ಆಲಿಸುವುದು ಮತ್ತು ಓದುವುದು ಮಾತನಾಡುವುದು | ಪದ್ಯಪಾಠ ಪ್ರಕ್ರಿಯೆಗಳು<br>ಕವಿ ಪರಿಚಯ ಮಾಡಿಸುವುದರೊಂದಿಗೆ ಕವನವನ್ನು ರಾಗಬದ್ಧವಾಗಿ,ಗಟ್ಟಿಯಾಗಿ, ಹಾಡುವುದು. ವಿದ್ಯಾರ್ಥಿಗಳಿಂದ ಹಾಡಿಸುವುದು.ಅರ್ಥೈಸುವುದು,ದೇಶಭಕ್ತಿ | ಅವಲೋಕನ | ತಪಶೀಲು ಪಟ್ಟಿ | 1.ವಿದ್ಯಾರ್ಥಿಗಳು ಕವನವನ್ನು ಆಸಕ್ತಿಯಿಂದ ಆಲಿಸಿದರೇ?<br>2.ಕವನವನ್ನು ಸಾಮೂಹಿಕವಾಗಿ ರಾಗವಾಗಿ ಹಾಡಿದರೇ ?<br>3.ದೇಶಭಕ್ತಿ,ತ್ಯಾಗ,ಪರೋಪಕಾರ ಮುಂತಾದ ಗುಣಗಳ ಬಗ್ಗೆ ತಿಳಿದುಕೊಂಡರೇ ?<br>4.ದೇಶಸೇವೆಯ ಬಗ್ಗೆ ಆಸಕ್ತಿವಹಿದರೇ ? |

| | | | | | |
|---|---|---|---|---|---|
| | | ,ತ್ಯಾಗ,<br>ಪರೋಪಕಾರ ಬುದ್ಧಿ,ಏಕಾತಭಾವ<br>ಮುಂತಾದ ಗುಣಗಳ ಬಗ್ಗೆ ದೇಶದ<br>ಸಂಸ್ಕೃತಿ,ಇತಿಹಾಸ, ಪ್ರಾಕೃತಿಕ<br>ಸೌಂದ್ಯರ್ಯಗಳ ಬಗ್ಗೆ ಚರ್ಚಿಸುವುದು | | | 5.ಭಾರತದ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಿದರೇ<br>6.ಕವನದ ಆಶಯವನ್ನು ಅರಿತರೇ ? |
| | ಬರವಣಿಗೆ | ನಿಯೋಜಿತ ಕಾರ್ಯ<br>ಒಬ್ಬ ಸ್ವಾತಂತ್ರ್ಯ ಹೋರಾಟಗಾರರ ಚಿತ್ರ ಸಂಗ್ರಹಿಸಿ ಅವರ ಬಗ್ಗೆ ಟಿಪ್ಪಣಿ ಬರೆಯಿರಿ | ಅವಲೋಕನ | ದರ್ಜಾಮಾಪನ | 1.ಅತ್ಯುತ್ತಮ –5<br>2.ಉತ್ತಮ–4<br>3.ಸಾಧಾರಣ–3<br>4.ಬರೆದಿಲ್ಲ–0 |

**ಪಾಠದ ಶೀರ್ಷಿಕೆ : ತಲಕಾಡಿನ ವೈಭವ(ಗದ್ಯ)**

ಬೋಧನೆಯ ಉದ್ದೇಶಗಳು 1.ಸೃಜನಶೀಲ ಪ್ರವಾಸಲೇಖನ ಅಭಿವ್ಯಕ್ತಿ ಸಾಮರ್ಥವನ್ನು ಬೆಳೆಸುವುದು
2.ಕನ್ನಡನಾಡಿನ ಸಾಹಿತ್ಯ,ಕಲೆ, ಸಂಸ್ಕೃತಿ,ಇತಿಹಾಸ, ಪ್ರಾಕೃತಿಕ ಸೌಂದ್ಯರ್ಯವನ್ನು ಅರಿಯುವುದು.

ಕಲಿಕಾ ಸಾಮಗ್ರಿಗಳು : ಹಿರೇಮಲ್ಲೂರು ಈಶ್ವರನ್‌ರವರಭಾವಚಿತ್ರ ಪರಿಚಯದ ಚಾರ್ಟ್, ಭಾರತದ ಭೂಪಟ, ಕರ್ನಾಟಕದ ಭೂಪಟ, ಪ್ರೇಕ್ಷಣೀಯ ಸ್ಥಳಗಳ ಚಿತ್ರಗಳು ಪ್ರವಾಸಕಥನಗಳ ಪುಸ್ತಕಗಳು

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿ | ಪ್ರೇರಣಾ ಚಟುವಟಿಕೆ<br>ವಿದ್ಯಾರ್ಥಿಗಳಿಗೆ ಗೊತ್ತಿರುವ ಪ್ರೇಕ್ಷಣೀಯ ಸ್ಥಳಗಳನ್ನು ಪಟ್ಟಿಮಾಡಿಸುವುದು. ಓದಿಸುವುದು ಕರ್ನಾಟಕದ ಪ್ರೇಕ್ಷಣೀಯ ಸ್ತಳಗಳ ಚಿತ್ರಗಳನ್ನು ತೋರಿಸಿ ಭೂಪಟದಲ್ಲಿಗುರುತಿಸುವಂತೆ ಪ್ರೇರೇಪಿಸುವುದು.ಪಟ್ಟಿ ಮಾಡಿದ ಸ್ಥಳಗಳು ಜಿಲ್ಲೆಯೊಳಗೆ, ರಾಜ್ಯದೊಳಗೆ, ದೇಶದೊಳಗೆ, ದೇಶದ ಹೊರಗೆ ಎಂದು ಅವರಿಂದಲೇ ವರ್ಗೀಕರಿಸುವುದು. ವಿದ್ಯಾರ್ಥಿಗಳು ತಾವು ಹೋದ ಪ್ರವಾಸದ ಅನುಭವಗಳನ್ನು 5-6 ವಾಕ್ಯಗಳಲ್ಲಿ ಬರೆದು ಓದುವಂತೆ ಪ್ರೇರೇಪಿಸುವುದು.ಆ ಮೂಲಕ ತಲಕಾಡಿನ ಐತಿಹಾಸಿಕ ಮಹತ್ವವನ್ನು ಪರಿಚಯಿಸುವುದು. | ವೀಕ್ಷಣೆ<br>ಅವಲೋಕನ | ತಾಳೆಪಟ್ಟಿ | 1.ವಿದ್ಯಾರ್ಥಿಗಳು ತಮಗೆ ಗೊತ್ತಿರುವ ಪ್ರೇಕ್ಷಣೀಯ ಸ್ಥಳಗಳನ್ನು ಪಟ್ಟಿ ಮಾಡಿದರೇ?<br>2.ಪ್ರೇಕ್ಷಣೀಯ ಸ್ಥಳಗಳ ಹೆಸರನ್ನು ಓದಿದರೇ?<br>3. ಪ್ರೇಕ್ಷಣೀಯ ಸ್ಥಳಗಳ ಚಿತ್ರಗಳನ್ನು ಗುರುತಿಸಿದರೇ ?<br>4.ತಾವು ಬರೆದ ಸ್ಥಳಗಳನ್ನು ಭೂಪಟದಲ್ಲಿ ಗುರುತಿದರೇ?<br>5.ಜಿಲ್ಲೆ,ರಾಜ್ಯ,ದೇಶ,ವಿದೇಶಗಳಲ್ಲಿ ಸ್ಥಳಗಳು ಬರುತ್ತವೆಂದು ವರ್ಗೀಕರಿಸಿದರೇ?<br>6.ವಿದ್ಯಾರ್ಥಿಗಳು ಪ್ರವಾಸದ ಅನುಭವಗಳನ್ನು ಬರೆದರೇ?<br>7.ಬರೆದ ಪ್ರವಾಸದ ಅನುಭವಗಳನ್ನು ತರಗತಿಯಲ್ಲಿ ಸ್ಪಷ್ಟವಾಗಿ ಓದಿದರೇ? |

| | | | | | |
|---|---|---|---|---|---|
| | ಆಲಿಸುವುದು<br>ಓದುವುದು<br>ಮಾತನಾಡುವುದು | ಪಾಠ ಪ್ರಕ್ರಿಯೆಗಳು<br>ಗದ್ಯಭಾಗವನ್ನು ಸ್ವರಭಾರದೊಂದಿಗೆ ವಾಚಿಸುವುದು.<br>ವಿದ್ಯಾರ್ಥಿಗಳಿಂದ ಗಟ್ಟಿವಾಚನ ಮಾಡಿಸುವುದು ವಿದ್ಯಾಥಿಗಳಿಗೆ ಮೌನವಾಗಿ ಓದುವಂತೆ ತಿಳಿಸುವುದು.<br>ಓದುವಿನ ಮೌಲ್ಯಮಾಪನಕ್ಕಾಗಿ ಕೆಲವು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುತ್ತ ಉತ್ತರಿಸುತ್ತ ಗದ್ಯಭಾಗವನ್ನು ಅರ್ಥೈಸುವುದು ಐತಿಹಾಸಿಕ ಸ್ಥಳಗಳ ಚಿತ್ರಗಳನ್ನು ತೋರಿಸಿ ತಮಗೆಗೊತ್ತಿರುವ ಮಾಹಿತಿ ಕೇಳುವುದು | ಅವಲೋಕನ | ತಪಶೀಲುಪಟ್ಟಿ | 1.ಶಿಕ್ಷಕರ ವಾಚನವನ್ನು ವಿದ್ಯಾರ್ಥಿಗಳು ಆಸಕ್ತಿಯಿದ ಆಲಿಸಿದರೇ?<br>2.ವಿದ್ಯಾರ್ಥಿಗಳು ಗದ್ಯಭಾಗವನ್ನು ಗಟ್ಟಿಯಾಗಿ ಸ್ವರಭಾರ ದೊಂದಿಗೆ ಓದಿದರೇ?<br>3.ವಿದ್ಯಾರ್ಥಿಗಳು ಆಸಕ್ತಿಯಿಂದ ಮೌನವಾಗಿ ಓ ದಿದರೇ? 4.ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರೇ?<br>5.ಭಾರತದ ಭೂಪಟದಲ್ಲಿ ತಲಕಾಡು ಸ್ಥಳವನ್ನು ಗುರುತಿಸಿದರೇ?<br>6.ಚಿತ್ರಪಟಗಳಲ್ಲಿದ್ದ ತಲಕಾಡಿನ ದೇವಾಲಯಗಳನ್ನು ಹೆಸರಿಸಿದರೇ?<br>7.ಕನ್ನಡನಾಡಿನ ರಾಜಮನೆತನಗಳನ್ನು ಹೆಸರಿಸಿದರೇ<br>8.ಕನ್ನಡನಾಡಿನ ಪ್ರಸಿದ್ಧ ರಾಜರುಗನ್ನು ಸ್ಮರಿಸಿದರೇ<br>9.ತಲಕಾಡಿನ ಇತಿಹಾಸವನ್ನು ಅರಿತುಕೊಂಡರೇ |
| | ಬರವಣಿಗೆ | ನಿಯೋಜಿತ ಕಾರ್ಯ<br>ಒಂದು ಪ್ರೇಕ್ಷಣೀಯ ಸ್ಥಳ ಚಿತ್ರ ಸಂಗ್ರಹಿಸಿ ಆ ಸ್ಥಳದ ಮಹತ್ವವನ್ನು ಕುರಿತು ಟಿಪ್ಪಣಿ ಬರೆಯಿರಿ | ಅವಲೋಕನ | ದರ್ಜಾಮಾಪನ | ಒಂದು ಪ್ರೇಕ್ಷಣೀಯ ಸ್ಥಳದ ಚಿತ್ರ ಸಂಗ್ರಹಿಸಿ ಆ ಸ್ಥಳದ ಮಹತ್ವವನ್ನು ಕುರಿತು ಟಿಪ್ಪಣಿ ಬರೆಯುವುದು<br>1.ಅತ್ಯುತ್ತಮ –5<br>2.ಉತ್ತಮ–4<br>3.ಸಾಧಾರಣ–3<br>4.ಬರೆದಿಲ್ಲ–0 |

**ಪಾಠದ ಶೀರ್ಷಿಕೆ : ಗೆಳೆತನ(ಪದ್ಯ)**

ಬೋಧನೆಯ ಉದ್ದೇಶಗಳು 1.ಗೆಳೆತನದ ಮಹತ್ವ ಮತ್ತು ಅನನ್ಯತೆಯ ಬಗ್ಗೆ ತಿಳಿಸುವುದು .
2.ವಿಶ್ವಸಾಮರಸ್ಯಕ್ಕೆ ಗೆಳೆತನದ ಪ್ರಾಮುಖ್ಯತೆನ್ನು ತಿಳಿಸುವುದು.

ಕಲಿಕಾ ಸಾಮಗ್ರಿಗಳು : ಚೆನ್ನವೀರ ಕಣವಿಯವರ ಭಾವಚಿತ್ರ, ಗೆಳೆತನದ ಚುಟುಕುಗಳು, ಕತೆ ಪುಸ್ತಕಗಳು

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಅಭಿವ್ಯಕ್ತಿಸುವುದು | ಪ್ರೇರಣಾ ಚಟುವಟಿಕೆ:<br>‘ ಇಲಿ ಮತ್ತು ಪಾರಿವಾಳ ’ ಕತೆಯನ್ನು ಹೇಳುವುದು (ಒಂದು ಕಾಡು ಮರದ ಮೇಲೆ ಪಾರಿವಾಳಗಳು ವಾಸ ಅದೇ ಮರದ ಕೆಳಗೆ ಇಲಿ ವಾಸ, ಇಲಿ ಮತ್ತು ಪಾರಿವಾಳ ಆತ್ಮೀಯ ಸ್ನೇಹಿತರು ಪಾರಿವಾಳಗಳು ಇಲಿಗೆ ದಿನ ಆಹಾರ ಬೇಟೆಗಾರನ ಬಲೆಗೆ ಪಾರಿವಾಳಗಳು, ಇಲಿ ಬಲೆಯನ್ನು ಕಡಿದು ಪಾರಿವಾಳಗಳನ್ನು ಬಿಡಿಸುವುದು____________ ) | ಅವಲೋಕನ | ತಪಶೀಲು ಪಟ್ಟಿ | 1.ಕತೆಯನ್ನು ಆಸಕ್ತಿಯಿಂದ ಆಲಿಸಿದರೇ ?<br>2.ಶಿಕ್ಷಕರ ಪ್ರಶ್ನೆಗೆ ಉತ್ತರಿಸಿದರೇ ?<br>3.ಇಲಿ ಪಾರಿವಾಳಗಳನ್ನು ರಕ್ಷಿಸಿದ್ದನ್ನು ಮೆಚ್ಚಿದರೇ ?<br>4.ಸ್ನೇಹಿತರೆಂದರೆ ಹೇಗಿರಬೇಕೆಂದು ತಿಳಿಸಿದರೇ |

| | | | | | |
|---|---|---|---|---|---|
| | ಆಲಿಸುವುದು ಮತ್ತು ಓದುವುದು ಮಾತನಾಡುವುದು | ಪದ್ಯಪಾಠ ಪ್ರಕ್ರಿಯೆಗಳು<br>ಕವಿ ಪರಿಚಯ ಮಾಡಿಸುವುದರೊಂದಿಗೆ ಗೆಳೆತನ ಕವನವನ್ನು ರಾಗಬದ್ಧವಾಗಿ,ಗಟ್ಟಿಯಾಗಿ, ಹಾಡುವುದು. ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು.ಅರ್ಥೈಸುವುದು, ಗೆಳೆತನದ ಮಹತ್ವ,ಗುಣಾವಗುಣಗಳ ಬಗ್ಗೆ ಪ್ರಶ್ನೋತ್ತರಗಳ ಮೂಲಕ ಚರ್ಚಿಸುವುದು ಗೆಳೆತನದ ಬಗ್ಗೆ ಕವನ ರಚಿಸಿ,ಸಂಗ್ರಹಿಸಿ ವಾಚಿಸುವಂತೆ ಪ್ರೇರೇಪಿಸುದು | ಅವಲೋಕನ | ತಪಶೀಲು ಪಟ್ಟಿ | 1.ವಿದ್ಯಾರ್ಥಿಗಳು ಕವನವನ್ನು ಆಸಕ್ತಿಯಿಂದ ಆಲಿಸಿದರೇ?<br>2.ಕವನವನ್ನು ಸಾಮೂಹಿಕವಾಗಿ ರಾಗವಾಗಿ ಹಾಡಿದರೇ ?<br>3.ಗೆಳೆತನದ ಗುಣಗಳನ್ನು ಪಟ್ಟಿ ಮಾಡಿದರೇ ?<br>4.ಗೆಳೆತನದಲ್ಲಿರಬಾರದ ಅವಗುಣಗಳನ್ನು ಪಟ್ಟಿ ಮಾಡಿದರೇ ?<br>5.ಕವನದ ಆಶಯವನ್ನು ಅರಿತರೇ ?<br>6.ಕವನ ರಚಿಸಿ/ಸಂಗ್ರಹಿಸಿ ವಾಚಿಸಿದರೇ ?<br>7.ಗೆಳೆತನದ ಮಹತ್ವವನ್ನು ಅರಿತರೇ ?<br>8.ತಮ್ಮ ಆತ್ಮೀಯ ಗೆಳೆಯರ ಬಗ್ಗೆ ತಿಳಿಸಿದರೇ |

ಪಾಠದ ಶೀರ್ಷಿಕೆ : ಭರವಸೆ (ಪದ್ಯ)

ಬೋಧನೆಯ ಉದ್ದೇಶಗಳು: 1.ಪ್ರಕೃತಿಯ ನೈಜತೆಗೆ ಮನುಷ್ಯನ ಸ್ವಾರ್ಥ ಹೇಗೆ ಧಕ್ಕೆಯಾಗುತ್ತದೆಂಬುನ್ನು ತಿಳಿಸುವುದು
2. ವಾಸ್ತವಿಕ–ಅವಾಸ್ತವಿಕ ಬದುಕಿನ ಬಗ್ಗೆ ಚರ್ಚಿಸುವುದು
3.ಭೂಮಿಯ ಸಂಜೀವಿನಿ ಗುಣದ ಭರವಸೆಯನ್ನು ಮೂಡಿಸುವುದು.

ಕಲಿಕಾ ಸಾಮಗ್ರಿಗಳು : ಬಿ.ಟಿ.ಲಲಿತನಾಯಕ್‌ರವರ ಭಾವಚಿತ್ರ, ಪದಗಳ ಅರ್ಥಗಳ ಚಾರ್ಟು, ಪ್ರಕೃತಿಯ ಚಿತ್ರಗಳು

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಅಭಿವ್ಯಕ್ತಿಸುವುದು | ಪ್ರೇರಣಾ ಚಟುವಟಿಕೆ:<br>ಮೂಡ್ನಕೂಡು ಚಿನ್ನಸ್ವಾಮಿಯವರ 'ನಾನೊಂದು ಮರವಾಗಿದ್ದರೆ' ಎಂಬ ಕವನವನ್ನು ಹಾಡುವುದು,ಮನುಷ್ಯನು ವಾಸ್ತವ ಜಗತ್ತಿನಲ್ಲಿ ಹೇಗೆ ಬದುಕುತ್ತಿದ್ದಾನೆಂಬುದನ್ನು ವಿವರಿಸುವುದು | ಅವಲೋಕನ | ತಪಶೀಲು ಪಟ್ಟಿ | 1.ಕವನವನ್ನು ಆಸಕ್ತಿಯಿಂದ ಆಲಿಸಿದರೇ ?<br>2.ಕವನದ ಸಾರಾಂಶವನ್ನು ಅರಿತುಕೊಂಡರೇ ?<br>3.ಮರದ ನಿಸ್ವಾರ್ಥತೆಯನ್ನು ಮೆಚ್ಚಿದರೇ ?<br>4.ಮರಗಳ ಮಹತ್ವವನ್ನು ಅರಿತುಕೊಂಡರೇ ? |
| | ಆಲಿಸುವುದು ಮತ್ತು ಓದುವುದು ಮಾತನಾಡುವುದು | ಪದ್ಯಪಾಠ ಪ್ರಕ್ರಿಯೆಗಳು<br>ಕವಿ ಪರಿಚಯ ಮಾಡಿಸುವುದರೊಂದಿಗೆ ಭರವಸೆ ಕವನವನ್ನು ರಾಗಬದ್ಧವಾಗಿ,ಗಟ್ಟಿಯಾಗಿ, ಹಾಡುವುದು. ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು.ಅರ್ಥೈಸುವುದು, ಪ್ರಕೃತಿಯ ಮಹತ್ವ, ವಾಸ್ತವಿಕ–ಅವಾಸ್ತವಿಕ ಜೀವನದ ಬಗ್ಗೆ ಪ್ರಶ್ನೋತ್ತರಗಳ ಮೂಲಕ ಚರ್ಚಿಸುವುದು | ಅವಲೋಕನ | ತಪಶೀಲು ಪಟ್ಟಿ | 1.ವಿದ್ಯಾರ್ಥಿಗಳು ಕವನವನ್ನು ಆಸಕ್ತಿಯಿಂದ ಆಲಿಸಿದರೇ?<br>2.ಕವನವನ್ನು ಸಾಮೂಹಿಕವಾಗಿ ರಾಗವಾಗಿ ಹಾಡಿದರೇ ?<br>3.ವಾಸ್ತವಿಕ ಜಗತ್ತಿನ ಬಗ್ಗೆ ತಿಳಿಸಿದರೇ ?<br>4.ಪ್ರಕೃತಿಯ ನೈಜತೆಯ ಬಗ್ಗೆ ತಿಳಿದುಕೊಂಡರೇ ?<br>5.ಕವನದ ಆಶಯವನ್ನು ಅರಿತರೇ ? |

**ಪಾಠದ ಶೀರ್ಷಿಕೆ : ಸಾರ್ಥಕ ಬದುಕಿನ ಸಾಧಕ (ಗದ್ಯ)**

**ಬೋಧನೆಯ ಉದ್ದೇಶಗಳು:** 1.ಜೀವನ ಚರಿತ್ರೆ,ಆತ್ಮಕತೆಗಳ ಅಧ್ಯಯನದ ಬಗ್ಗೆ ಆಸಕ್ತಿ ಮೂಡಿಸುವುದು.
2.ಡಿ.ವಿ.ಜಿಯವರ ಆದರ್ಶಗಳನ್ನು ಅರಿತುಕೊಳ್ಳುವುದು.
3.ಪರಿಶ್ರಮ,ಪ್ರತಿಭೆ,ಪ್ರಾಮಾಣಿಕತೆ,ನಿಷ್ಠೆ,ಧ್ಯೇಯ,ದೃಢಸಂಕಲ್ಪಗಳಿದ್ದರೆ ಆದರ್ಶವಾಗಿ ಬಾಳಬಹುದೆಂಬುದನ್ನು ತಿಳಿಸುವುದು

**ಕಲಿಕಾ ಸಾಮಗ್ರಿಗಳು :** ಡಿ.ವಿ.ಜಿ, ಸರ್.ಎಂ.ವಿಶ್ವೇಶ್ವರಯ್ಯನವರು ,ಮಿರ್ಜಾ ಇಸ್ಮಾಯಿಲ್ ಮುಂತಾದ ಸಾಧಕರ ಚಿತ್ರಗಳು ,ಸಾಧಕರ ಹೆಸರುಗಳ ಕಾರ್ಡುಗಳು ,ಜೀವನಚರಿತ್ರೆ, ಆತ್ಮಕತೆಗಳಪುಸ್ತಕ, ಪದಗಳ ಅರ್ಥಗಳ ಚಾರ್ಟು, ಡಿ.ವಿ.ಜಿಯವರ ಕೃತಿಗಳು

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಮಾತನಾಡುವುದು | ಪ್ರೇರಣಾ ಚಟುವಟಿಕೆ:<br>ಪ್ರತಿಯೊಬ್ಬ ವಿದ್ಯಾರ್ಥಿಗೆ ಒಬ್ಬೊಬ್ಬ ಸಾಧಕರ ಚಿತ್ರ,ಮತ್ತೊಷ್ಟು ವಿದ್ಯಾರ್ಥಿಗಳಿಗೆ ಸಾಧಕರ ಹೆಸರಿನ ಕಾರ್ಡುಗಳು, ಮತ್ತೊಷ್ಟು ವಿದ್ಯಾರ್ಥಿಗಳಿಗೆ ಸಾಧಕರ ಜೀವನಚರಿತ್ರೆಯ ಪುಸ್ತಕಗಳನ್ನು ನೀಡುವುದು.ಚಿತ್ರ ಮತ್ತು ಸಾಧಕರ ಹೆಸರು ಹೊಂದಿಸುವಂತೆ ತಿಳಿಸುವುದು,ಮತ್ತು ಅವರ ಜೀವನಚರಿತ್ರೆ ಪಡೆ ದಿರುವ ವಿದ್ಯಾರ್ಥಿಗಳಿಂದ ಅವರ ಪರಿಚಯ ಮಾಡುವಂತೆ ಪ್ರೇರೇಪಿಸುವುದು,ಆ ಮೂಲಕ ಡಿ.ವಿ.ಜಿಯವರ ಜೀವನ ಪರಿಚಯಿಸುವುದು. | ಅವಲೋಕನ | ತಪಶೀಲು ಪಟ್ಟಿ | 1) ವಿದ್ಯಾರ್ಥಿಗಳು ಸಾಧಕರ ಚಿತ್ರಗಳನ್ನು ಗುರುತಿಸಿದರೇ<br><br>2) ವಿದ್ಯಾರ್ಥಿಗಳು ಸಾಧಕರ ಹೆಸರುಗಳನ್ನು ಹೆಸರಿಸಿದರೇ<br><br>3) ವಿದ್ಯಾರ್ಥಿಗಳು ಸಾಧಕರನ್ನು ಪರಿಚಯಿಸಿದರೇ ?<br><br>4) ಡಿ.ವಿ.ಜಿಯವರ ಭಾವಚಿತ್ರವನ್ನು ಗುರುತಿಸಿದರೇ ?<br><br>5) ಚಟುವಟಿಕೆಯಲ್ಲಿ ಆಸಕ್ತಿಯಿಂದ ಭಾಗವಹಿಸಿದರೇ ? |

| | | | | | |
|---|---|---|---|---|---|
| | ಆಲಿಸುವುದು ಮತ್ತು ಓದುವುದು ಮಾತನಾಡುವುದು | ಪಾಠಪ್ರಕ್ರಿಯೆಗಳು<br><br>ಪಾಠವನ್ನು ಗಟ್ಟಿಯಾಗಿ ಸ್ವರಭಾರದೊಂದಿಗೆ ಓದುವುದು, ವಿದ್ಯಾರ್ಥಿಗಳಿಂದ ಗ್ವಟ್ಟಿಯಾಗಿ ಓದಿಸುವುದು,ಮೌನವಾಚನ ನೀಡುವುದು, ನಂತರ ಪ್ರಶ್ನೋತ್ತರ ವಿಧಾನದ ಮೂಲಕ ಡಿ.ವಿ.ಜಿ ಯವರ ಬಾಲ್ಯಜೀವನ, ಶಿಕ್ಷಣ,ಸಾಧನೆಗಳು ಆದರ್ಶಗಳನ್ನು ಅರ್ಥೈಸುವುದು | ಅವಲೋಕನ | ತಪಶೀಲು ಪಟ್ಟಿ | 1) ವಿದ್ಯಾರ್ಥಿಗಳು ಶಿಕ್ಷಕರ ವಾಚನವನ್ನು ಆಸಕ್ತಿಯಿಂದ ಆಲಿಸಿದರೇ ?<br>2) ಗದ್ಯಭಾಗವನ್ನು ಗಟ್ಟಿಯಾಗಿ ಸ್ವರಭಾರದೊಂದಿಗೆ ಓದಿದರೇ ?<br>3) ಡಿ.ವಿ.ಜಿಯವರ ಶಿಕ್ಷಣದ ಬಗ್ಗೆ ಅವಲೋಕಿಸಿದರೇ ?<br>4) ಡಿ.ವಿ.ಜಿಯವರ ಆದರ್ಶಗಳನ್ನು ಮೆಚ್ಚಿಕೊಂಡರೇ<br>5) ಡಿ.ವಿ.ಜಿಯವರ ಸಾಹಿತ್ಯಕೃತಿಗಳನ್ನು ಹೆಸರಿಸಿದರೇ ? |

**ಪಾಠದ ಶೀರ್ಷಿಕೆ : ವಚನಾಮೃತ (ಪದ್ಯ)**

ಬೋಧನೆಯ ಉದ್ದೇಶಗಳು: : 1.ವಚನ ಸಾಹಿತ್ಯದ ಮಹತ್ವವನ್ನು ತಿಳಿಸುವುದು
2.ಪ್ರಕೃತಿಯಲ್ಲಿರುವ ವಸ್ತುಗಳು,ಮರಗಳಲ್ಲಿರುವ ವಿಶಿಷ್ಟ ಗುಣಗಳನ್ನು ತಿಳಿಸುವುದು
3.ಭಕ್ತಿಭಾವ ಮುಂತಾದ ವಿಷಯಗಳ ಬಗ್ಗೆ ಅರಿವು ಮೂಡಿಸುವುದು

ಕಲಿಕಾ ಸಾಮಗ್ರಿಗಳು : ಅಕ್ಕಮಹಾದೇವಿ,ಅಮುಗೆ ರಾಯಮ್ಮ, ಆಯ್ದಕ್ಕಿ ಮಾರಯ್ಯ ಮಂತಾದ ವಚನಾಕಾರರ ಭಾವಚಿತ್ರ ,ವಚನಗಳ ಪುಸ್ತಕಗಳು ,ವಚನಗಳ ಆಡಿಯೋ

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಮಾತನಾಡುವುದು ಬರವಣಿಗೆ | ಪ್ರೇರಣಾ ಚಟುವಟಿಕೆ:<br>ವಚನಕಾರರು ಹಾಗೂ ಅವರ ಅಂಕಿತನಾಮಗಳನ್ನು ಕಪ್ಪುಹಲಗೆ ಮೇಲೆ ಬರೆಸುವುದು,ಓದಿಸುವುದು.ವಿದ್ಯಾರ್ಥಿಗಳಿಗೆ ಗೊತ್ತಿರುವ ವಚನಗಳನ್ನು ಹಾಡಿಸುವುದು,ವಚನ ಸಂಗ್ರಹ ಪುಸ್ತಕದಲ್ಲಿನ ವಚನಗಳನ್ನು ಹಾಡಿಸುವುದು ಮತ್ತು ವಚನಗಳ ಆಡಿಯೋ ಕೇಳಿಸುವುದು ನಂತರ ವಚನಕಾರರಾದ ಅಕ್ಕಮಹಾದೇವಿ,ಅಮುಗೆರಾಯಮ್ಮ, ಆಯ್ದಕ್ಕಿಮಾರಯ್ಯರ ಪರಿಚಯ ಮಾಡಿಸುವುದು | ಅವಲೋಕನ | ತಪಶೀಲು ಪಟ್ಟಿ | 1.ವಚನಕಾರರನ್ನು ಹೆಸರಿಸಿದರೇ ?<br>2.ವಚನಕಾರರ ಅಂಕಿತನಾಮಗಳನ್ನು ಬರೆದರೇ ?<br>3.ವಚನಗಳನ್ನು ಆಲಿಸಿದರೇ ?<br>4.ಹಾಡಿದ ವಚನಗಳ ರಚನಕಾರರನ್ನು ಗುರುತಿಸಿದರೆ ?<br>5.ವಿದ್ಯಾರ್ಥಿಗಳು ವಚನಗಳನ್ನು ಹಾಡಿದರೇ ? |

| | | | | | |
|---|---|---|---|---|---|
| | ಆಲಿಸುವುದು ಮತ್ತು ಮಾತನಾಡುವುದು | ಪಾಠಪ್ರಕ್ರಿಯೆಗಳು<br>ವಚನಾಮೃತ ಪದ್ಯದ ವಚನಗಳನ್ನು ರಾಗವಾಗಿ,ಗಟ್ಟಿಯಾಗಿ ಹಾಡಿಸುವುದು, ವಿದ್ಯಾರ್ಥಿಗಳಿಂದಸಾಮೂಹಿಕವಾಗಿ ಹಾಡಿಸುವುದು ಪ್ರಶ್ನೋತ್ತರ ವಿಧಾನದ ಮೂಲಕ ಪ್ರಕೃತಿಯಲ್ಲಿರುವ ವಸ್ತುಗಳಲ್ಲಿರುವರುವ ಸಹಜ ಗುಣಗಳು,ಕಾಯಕದ ಮಹತ್ವ.ಮತ್ತು ಭಕ್ತಿ ಮುಂತಾದ ವಿಷಯಗಳ ಬಗ್ಗೆ ಅರ್ಥೈಸುವುದು | ಅವಲೋಕನ | ತಪಶೀಲು ಪಟ್ಟಿ | 1.ಪದ್ಯದಲ್ಲಿನ ವಚನಗಳನ್ನು ಆಲಿಸಿದರೇ ?<br>2.ಸಾಮೂಹಿಕವಾಗಿ ವಚನಗಳನ್ನು ಹಾಡಿದರೇ ?<br>3.ವಸ್ತುಗಳ ಸಹಜ ಗುಣಗಳನ್ನು ತಿಳಿಸಿದರೇ ?<br>4.ಪ್ರಶ್ನೋತ್ತರ ಚರ್ಚೆಯಲ್ಲಿ ಭಾಗವಹಿಸಿದರೇ ?<br>5.ಕಾಯಕದ ಮಹತ್ವದ ತಿಳಿದರೇ ? |
| | ಬರವಣಿಗೆ | ನಿಯೋಜಿತ ಕಾರ್ಯ<br>ಹತ್ತು ವಚನಕಾರರ ಹತ್ತು ವಚನಗಳನ್ನು ಸಂಗ್ರಹಿಸಿರಿ | ಅವಲೋಕನ | ದರ್ಜಾಮಾಪನ | 1.ಅತ್ಯುತ್ತಮ –5(10ವಚನ)<br>2.ಉತ್ತಮ–4 (8ವಚನ)<br>3.ಸಾಧಾರಣ–3 (6ವಚನ)<br>4.ಕನಿಷ್ಠ–2 (4ವಚನ) |

ಪಾಠದ ಶೀರ್ಷಿಕೆ : ಒಳ್ನುಡಿ (ಪದ್ಯ)

ಬೋಧನೆಯ ಉದ್ದೇಶಗಳು: : 1) ಕನ್ನಡ ಸಾಹಿತ್ಯದಲ್ಲಿ ಸರ್ವಜ್ಞನ ತ್ರಿಪದಿಗಳಲ್ಲಿನ ಮೌಲ್ಯಗಳನ್ನು ತಿಳಿಸುವುದು.
2) ತಂದೆ-ತಾಯಿಗಳು,ಗುರು-ಹಿರಿಯರು,ವಿದ್ಯೆ,ಸಜ್ಜನರು ಮುಂತಾದವರ ಬಗ್ಗೆ ಗೌರವ ಭಾವನೆ ಮೂಡಿಸುವುದು.
3) ಆಹಾರಾರೋಗ್ಯದ ಮಹತ್ವ ತಿಳಿಯುವುದು.

ಕಲಿಕಾ ಸಾಮಗ್ರಿಗಳು : ಸರ್ವಜ್ಞನ ಭಾವಚಿತ್ರ, ಸರ್ವಜ್ಞನ ತ್ರಿಪದಿಗಳ ಪುಸ್ತಕಗಳು , ಜನಪದ ತ್ರಿಪದಿಗಳ ಪುಸ್ತಕಗಳು, ಸರ್ವಜ್ಞನ ತ್ರಿಪದಿಗಳ ಆಡಿಯೋ

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಮಾತನಾಡುವುದು ಬರವಣಿಗೆ | ಪ್ರೇರಣಾ ಚಟುವಟಿಕೆ:<br><br>ಸರ್ವಜ್ಞನ ತ್ರಿಪದಿಗಳನ್ನು ,ಜನಪದ ತ್ರಿಪದಿಗಳನ್ನು ಹಾಡುವುದು. ಸರ್ವಜ್ಞನ ತ್ರಿಪದಿಗಳಗಳ ಪುಸ್ತಕ ನೀಡಿ ವಿದ್ಯಾರ್ಥಿಗಳಿಂದ ಹಾಡಿಸುವುದು. ಸರ್ವಜ್ಞನ ಭಾವಚಿತ್ರ ತೋರಿಸುತ್ತ ಸರ್ವಜ್ಞನನ ಸ್ಥಳ,ಕಾಲ,ಇತ್ಯಾದಿ ಸರ್ವಜ್ಞನ ಮಾಹಿತಿಗಳನ್ನು ಕಪ್ಪುಹಲಗೆ ಮೇಲೆ ಬರೆಸುವುದು. ಅದನ್ನು ಓದಿಸುವುದು | ಅವಲೋಕನ | ತಪಶೀಲು ಪಟ್ಟಿ | 1) ವಿದ್ಯಾರ್ಥಿಗಳು ತ್ರಿಪದಿಗಳನ್ನು ಆಸಕ್ತಿಯಿಂದ ಆಲಿಸಿದರೇ ?<br>2) ವಿದ್ಯಾರ್ಥಿಗಳು ತ್ರಿಪದಿ ಗಳನ್ನು ಹಾಡಿದರೇ ?<br>3) ಸರ್ವಜ್ಞನನ ಸ್ಥಳ,ಕಾಲ,ಇತ್ಯಾದಿ ಸರ್ವಜ್ಞನ ಮಾಹಿತಿಗಳನ್ನು ಕಪ್ಪುಹಲಗೆ ಮೇಲೆ ಬರೆದರೇ ?<br>4) ಸರ್ವಜ್ಞನ ಮಾಹಿತಿಗಳನ್ನು ಕಪ್ಪುಹಲಗೆ ಮೇಲೆ ಬರೆದದ್ದನ್ನು ಓದಿದರೇ ? |

| | | | | | |
|---|---|---|---|---|---|
| | ಆಲಿಸುವುದು ಮತ್ತು ಮಾತನಾಡುವುದು ಬರವಣಿಗೆ | ಪಾಠಪ್ರಕ್ರಿಯೆಗಳು<br><br>ಒಳ್ನುಡಿ ಪದ್ಯದ ತ್ರಿಪದಿಗಳನ್ನು ಆಡಿಯೋ ಮೂಲಕ ಕೇಳಿಸುವುದು ಗಟ್ಟಿಯಾಗಿ ರಾಗಕ್ಕನು ಗುಣವಾಗಿ ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು ಹೊಸಪದಗಳ ಅರ್ಥನೀಡಿ ಸಾರಾಂಶ ಬರೆಯುವಂತೆ ಪ್ರೇರೇಪಿಸುವುದು. ಸಾರಾಂಶವನ್ನು ಓದಿಸುವುದು,ನಂತರ ಚಿಕ್ಕಚಿಕ್ಕ ಪ್ರಶ್ನೆಗಳ ಮೂಲಕ ವಿಸ್ತರಿಸಿ ಪ್ರಶಂಸಿಸುವಂತೆ ಮಾಡುವುದು ಪ್ರಶ್ನೋತ್ತರ ವಿಧಾನದ ಮೂಲಕ ತಂದೆ–ತಾಯಿಗಳು,ಗುರು–ಹಿರಿಯರು,ವಿದ್ಯೆ,ಸಜ್ಜನರು ಮುಂತಾದವರ ಬಗ್ಗೆ ಗೌರವ ಭಾವನೆ ಮಹತ್ವ. ಮತ್ತು<br>ಮುಂತಾದ ವಿಷಯಗಳ ಬಗ್ಗೆ ಅರ್ಥೈಸುವುದು | ಅವಲೋಕನ | ತಪಶೀಲು ಪಟ್ಟಿ | 1)ಸರ್ವಜ್ಞನ ತ್ರಿಪದಿಗಳನ್ನು ಆಸಕ್ತಿಯಿಂದ ಆಲಿಸಿದರೇ<br><br>2)ಸರ್ವಜ್ಞನ ತ್ರಿಪದಿಗಳನ್ನು ಸಾಮೂಹಿಕವಾಗಿ ಹಾಡಿದರೇ<br><br>3)ಸರ್ವಜ್ಞನ ತ್ರಿಪದಿಗಳ ಸಾರಾಂಶವನ್ನು ಬರೆದರೇ ?<br><br>4)ಸರ್ವಜ್ಞನ ತ್ರಿಪದಿಗಳ ಸಾರಾಂಶವನ್ನು ಓದಿದರೇ<br><br>5)ಶಿಕ್ಷಕರು ಕೇಳಿದ ಚಿಕ್ಕಚಿಕ್ಕ ಪ್ರಶ್ನೆಗಳಿಗೆ ಉತ್ತರಿಸಿದರೇ |
| | ಬರವಣಿಗೆ ಅಭಿವ್ಯಕ್ತಿ | ಚಟುವಟಿಕೆ:<br><br>ಸರ್ವಜ್ಞನ ಹತ್ತು ತ್ರಿಪದಿಗಳನ್ನು ಸಂಗ್ರಹಿಸಿ ಬರೆಯಿರಿ | ಅವಲೋಕನ | ದರ್ಜಾಮಾಪನ | 1) ಸಂಗ್ರಹ –4<br>2) ಶುದ್ಧ ಸಂದರ ಬರವಣಿಗೆ–1 |

ಪಾಠದ ಶೀರ್ಷಿಕೆ : ರಾಜಕುಮಾರಿ ಜಾಣ್ಮೆ (ಗದ್ಯ)

ಬೋಧನೆಯ ಉದ್ದೇಶಗಳು: 1) ಜನಪದ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸುವುದು.
2) ಜನಪದ ಕತೆಗಳಲ್ಲಿನ ಮೌಲ್ಯಗಳನ್ನು ಅರಿಯುವುದು.
3) ರಾಜಕುಮಾರಿಯ ಜಾಣ್ಮೆಯನ್ನು ಮೆಚ್ಚುವಂತೆ ಮಾಡುವುದು.

ಕಲಿಕಾ ಸಾಮಗ್ರಿಗಳು : ಕವಿ ಡಿ.ಕೆ.ರಾಜೇಂದ್ರ ರವರ ಭಾವಚಿತ್ರ ಜನಪದ ಕತೆಗಳ ಪುಸ್ತಕ

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಮಾತನಾಡುವುದು ಬರವಣಿಗೆ | ಪ್ರೇರಣಾ ಚಟುವಟಿಕೆ: ಯಾವುದಾದರೂ ಒಂದು ಜನಪದ ಕತೆಯನ್ನು ಹೇಳುವುದು , ಮಕ್ಕಳಿಗೆ ಗೊತ್ತಿರುವ ಕತೆಗಳನ್ನು ಹೇಳಿಸುವುದು, ಕತೆ ಬರೆಯುವುವಂತೆ ಪ್ರೇರೇಪಿಸುವುದು ನಂತರ ಕವಿಯ ಭಾವಚಿತ್ರ ತೋರಿಸುತ್ತಾ ಕವಿಯ ಸ್ಥಳ.ಕಾಲ,ಕೃತಿಗಳನ್ನು ಕಪ್ಪುಹಲಗೆ ಮೇಲೆ ಬರೆಸುತ್ತಾ.ವಾಕ್ಯರೂಪಕ್ಕೆ ಬರೆಸುವುದು, ಓದಿಸುವುದು | ಅವಲೋಕನ | ತಪಶೀಲು ಪಟ್ಟಿ | 1.ಕಥೆಯನ್ನು ವಿದ್ಯಾರ್ಥಿಗಳು ಆಸಕ್ತಿಯಿಂದ ಆಲಿಸಿದರೇ?<br>2.ವಿದ್ಯಾರ್ಥಿಗಳು ಕಥೆಯ ಮೌಲ್ಯವನ್ನು ಗುರುತಿಸಿದರೇ?<br>3.ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರೇ?<br>4.ವಿದ್ಯಾರ್ಥಿಗಳು ಕಥೆಯನ್ನು ಹೇಳಿದರೇ ?<br>5.ಕವಿಕಾವ್ಯ ಪರಿಚಯದ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿದರೇ ? |

| | | | | | |
|---|---|---|---|---|---|
| | ಆಲಿಸುವುದು ಮತ್ತು ಮಾತನಾಡುವುದು ಬರವಣಿಗೆ | ಪಾಠಪ್ರಕ್ರಿಯೆಗಳು<br><br>ಪಾಠವನ್ನು ಗಟ್ಟಿಯಾಗಿ ಸ್ವರಭಾರದೊಂದಿಗೆ ಓದುವುದು, ವಿದ್ಯಾರ್ಥಿಗಳಿಂದ ಗಟ್ಟಿಯಾಗಿ ಓದಿಸುವುದು,ಮೌನವಾಚನ ನೀಡುವುದು,<br>ನಂತರ ಕಥಾನಕ,ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು | ಅವಲೋಕನ | ತಪಶೀಲು ಪಟ್ಟಿ | 1.ಶಿಕ್ಷಕರ ವಾಚನವನ್ನು ವಿದ್ಯಾರ್ಥಿಗಳು ಆಸಕ್ತಿಯಿಂದ ಆಲಿಸಿದರೇ?<br>2.ವಿದ್ಯಾರ್ಥಿಗಳು ಗದ್ಯಭಾಗವನ್ನು ಗಟ್ಟಿಯಾಗಿ ಸ್ವರಭಾರ ದೊಂದಿಗೆ ಓದಿದರೇ?<br>3.ವಿದ್ಯಾರ್ಥಿಗಳು ಆಸಕ್ತಿಯಿಂದ ಮೌನವಾಗಿ ಓದಿದರೇ?<br>4.ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರೇ?<br>5. ರಾಜಕುಮಾರಿ ಜಾಣ್ಮೆ ಕತೆಯನ್ನು ತಮ್ಮ ವಾಕ್ಯಗಳಲ್ಲಿ ಹೇಳಿದರೇ ? |

ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 8

ಪಾಠದ ಶೀರ್ಷಿಕೆ : ಬಿಲ್ಲಹಬ್ಬ (ಗದ್ಯ)

ಬೋಧನೆಯ ಉದ್ದೇಶಗಳು: :1) ವಿದ್ಯಾರ್ಥಿಗಳಲ್ಲಿ ನಾಟಕ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸುವುದು.
2) ಪ್ರಸ್ತುತ ನಾಟಕದಲ್ಲಿನ ಹಾಸ್ಯಪ್ರಸಂಗಗಳನ್ನು ಪ್ರಶಂಸಿಸುವಂತೆ ಮಾಡುವುದು.
3) ಅಭಿನಯ ಕಲೆಯನ್ನು ಬೆಳೆಸುವುದು.

ಕಲಿಕಾ ಸಾಮಗ್ರಿಗಳು : ಕವಿಯ ಭಾವಚಿತ್ರ ಆಕಾರ ಗ್ರಂಥ, ಕಿರುನಾಟಕಗಳ ಪುಸ್ತಕಗಳು, ಕಂಸಾಯಣ ನಾಟಕದ ಚಿತ್ರಗಳು

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಅಭಿವ್ಯಕ್ತಿಸುವುದು. | ಪ್ರೇರಣಾ ಚಟುವಟಿಕೆ<br>ಏಕಾಭಿನಯ ಪಾತ್ರ<br>ಭಕ್ತಪ್ರಹ್ಲಾದ–ಹಿರಣ್ಯಕಶಿಪು,ಸಮಾಗಮ ನಾಟಕದಲ್ಲಿನ ಭೀಮ–ಘಟೋತ್ಕಚ ನಡುವೆ ನಡೆಯುವ ಸಂವಾದವನ್ನು ಅಭಿನಯಿಸಿ ತೋರಿಸುವುದು.<br>ವಿದ್ಯಾರ್ಥಿಗಳಿಗೆ ಗೊತ್ತಿರುವ ಏಕಾಭಿನಯ ಪಾತ್ರವನ್ನು ಮಾಡುವಂತೆ ಪ್ರೇರೇಪಿಸುವುದು | ವೀಕ್ಷಣೆ | ತಪಶೀಲುಪಟ್ಟಿ | 1.ಅಭಿನಯವನ್ನು ವಿದ್ಯಾರ್ಥಿಗಳು ವೀಕ್ಷಿಸಿದರೇ?<br>2.ಮಾತುಗಳನ್ನು ಆಸಕ್ತಿಯಿಂದ ಆಲಿಸಿದರೇ?<br>3.ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸದರೇ?<br>4.ತಾವು ಅಭಿನಯಿಸಲು ಆಸಕ್ತಿ ತೋರಿದರೇ?<br>5.ಅಭಿನಯದಲ್ಲಿನ ಹಾಸ್ಯಪ್ರಸಂಗವನ್ನು ಮೆಚ್ಚಿದರೇ ? |

| | | | | | |
|---|---|---|---|---|---|
| | ಆಲಿಸುವುದು ಮತ್ತು ಅಭಿವ್ಯಕ್ತಿಸುವುದು. | ಪಾಠ ಪ್ರಕ್ರಿಯೆಗಳು<br><br>ಪಾತ್ರಗಳ ಪರಿಚಯದೊಂದಿಗೆ ಅಭಿನಯಿಸಿ ತೋರಿಸುವುದು.<br>ವಿದ್ಯಾರ್ಥಿಗಳಿಗೆ ಪಾತ್ರಗಳನ್ನು ಹಂಚಿ ಪಾತ್ರಗಳ ಮಾತುಗಳನ್ನು ಹೇಳಿಸುವುದು.<br>ಪ್ರಶ್ನೋತ್ತರ ವಿಧಾನ ನಾಟಕಾಭಿನಯದ ಮೂಲಕ ಮೂಲಕ ಚರ್ಚಿಸುವುದು | ವೀಕ್ಷಣೆ | ತಪಶೀಲುಪಟ್ಟಿ | 1.ಶಿಕ್ಷಕರ ವಾಚಾನಾಭಿನಯವನ್ನು ಆಸಕ್ತಿಯಿಂದ ಆಲಿಸಿದರೇ?<br>2.ಪಾತ್ರಗಳಿಗೆ ತಕ್ಕಂತೆ ವಿದ್ಯಾರ್ಥಿಗಳು ಅಭಿನಯಿಸಿ ತೋರಿಸಿದರೇ?<br>3.ನಾಟಕ ಅಭಿನಯಿಸಲು ಆಸಕ್ತಿ ಉತ್ತಮವಾಗಿತ್ತೇ?<br>4.ವಯಸ್ಸಿಗ, ಕಂಸ–ಮಂತ್ರಿಗಳರ ಮಾತುಗಳನ್ನು ಮೆಚ್ಚಿದರೇ?<br>5.ಶಿಕ್ಷಕರು ಕೇಳಿದ ಚಿಕ್ಕಚಿಕ್ಕ ಪ್ರಶ್ನೆಗಳಿಗೆ ಆಸಕ್ತಿಯಿಂದ ಉತ್ತಿರಿಸದರೇ? |
| | ಮೌಖಿಕ ಅಭಿವ್ಯಕ್ತಿ | ಚಟುವಟಿಕೆ:<br>ಏಕಾಭಿನಯ ಪಾತ್ರಗಳು (ವಿದ್ಯಾರ್ಥಿಗಳು ಅಭಿನಯಿಸಿ ತೋರಿಸುವುದು) | ವೀಕ್ಷಣೆ | ದರ್ಜಾಮಾಪನಿ | 1.ವಿದ್ಯಾರ್ಥಿಗಳು ಅಭಿನಯಿಸಿ ತೋರಿಸಿದರೇ ?<br>2.ಮಾತುಗಳ ಉಚ್ಚಾರ ಸ್ಪಷ್ಟವಾಗಿತ್ತೇ ?<br>3.ಪಾತ್ರಗಳಿಗೆ ತಕ್ಕಂತೆ ಭಾವಭಿವ್ಯಕ್ತಿ ತೋರಿಸಿದರೇ ?<br>1) ಅತ್ಯುತ್ತಮ–5<br>2) ಉತ್ತಮ–3<br>3) ಭಾಗವಹಿಸುವಿಕೆ– |

ಪಾಠದ ಶೀರ್ಷಿಕೆ : ಜೀವನ ದರ್ಶನ (ಪದ್ಯ)

ಬೋಧನೆಯ ಉದ್ದೇಶಗಳು: 1) ವಿದ್ಯಾರ್ಥಿಗಳಿಗೆ ದಾಸಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿಸುವುದು
2) ಭಕ್ತಿ–ಮುಕ್ತಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು.
3) ಕಾರ್ಯಫಲಗಳ ಬಗ್ಗೆ ಅರಿವು ಮೂಡಿಸುವುದು.

ಕಲಿಕಾ ಸಾಮಗ್ರಿಗಳು : ಶ್ರೀಪಾದರಾಜರು,ಪುರಂದರದಾಸರು,ಕನಕದಾಸರು ಮತ್ತು ಇತರ ದಾಸರ ಭಾವಚಿತ್ರಗಳು. ದಾಸರ ಪದಗಳ ಪುಸ್ತಕಗಳು ದಾಸರಪದಗಳ ಆಡಿಯೋ ದಾಸರ ಪದಗಳ ರಾಗಗಳು (ಟ್ಯೂನ್)

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಮಾತನಾಡುವುದು ಬರವಣಿಗೆ | ಪ್ರೇರಣಾ ಚಟುವಟಿಕೆ:<br><br>ಕನ್ನಡ ಸಾಹಿತ್ಯದಲ್ಲಿ ಬರುವ ದಾಸರ ಹೆಸರುಗಳನ್ನು ಬರೆಸುವುದು,ಅವರ ಅಂಕಿತನಾಮಗಳನ್ನು ಬರೆಸುವುದು. ಓದಿಸುವುದು,ದಾಸರ ಕೀರ್ತನೆಗಳನ್ನು ವಿದ್ಯಾರ್ಥಿಗಳಿಗೆ ಕೇಳಿಸುವುದು,ದಾಸರಪದಗಳನ್ನು ಹಾಡುವುದು,ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು. ಆ ಮೂಲಕ ಶ್ರೀಪಾದರಾಜರು, ಪುರಂದರದಾಸರು,ಕನಕದಾಸರು ಪರಿಚಯ ಮಾಡಿಸುವುದು. | ಅವಲೋಕನ | ತಪಶೀಲು ಪಟ್ಟಿ | 1) ವಿದ್ಯಾರ್ಥಿಗಳು ದಾಸರ ಹೆಸರುಗಳನ್ನು ಬರೆದರೆ ?<br>2) ದಾಸರ ಕೀರ್ತನೆಗಳನ್ನು ಆಸಕ್ತಿಯಿಂದ ಆಲಿಸಿದರೇ ?<br>3) ದಾಸರ ಪದಗಳನ್ನು ಸಾಮೂಹಿಕವಾಗಿ ಹಾಡಿದರೇ ?<br>4) ದಾಸರ ಸ್ಥಳ ಕಾಲ ಕೃತಿಗಳನ್ನು ಕಪ್ಪುಹಲಗೆ ಮೇಲೆ ಬರೆದರೇ ?<br>5) ದಾಸರ ಸ್ಥಳ ಕಾಲ ಕೃತಿಗಳನ್ನು ಕಪ್ಪುಹಲಗೆ ಮೇಲೆ ಬರೆದದ್ದನ್ನು ಓದಿದರೇ ? |

| | | | | | |
|---|---|---|---|---|---|
| | ಆಲಿಸುವುದು ಮತ್ತು ಮಾತನಾಡುವುದು ಬರವಣಿಗೆ | ಪಾಠ ಪ್ರಕ್ರಿಯೆಗಳು<br><br>ಶ್ರೀಪಾದರಾಜರ ಕೀರ್ತನೆಯನ್ನು ಆಡಿಯೋ ಮೂಲಕ ವಿದ್ಯಾರ್ಥಿಗಳಿಗೆ ಕೇಳಿಸುವುದು, ,ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು. ಹೊಸಪದಗಳ ಅರ್ಥನೀಡಿ ಸಾರಾಂಶ ಬರೆಯುವಂತೆ ಪ್ರೇರೇಪಿಸುವುದು. ಸಾರಾಂಶವನ್ನು ಓದಿಸುವುದು, ನಂತರ ಚಿಕ್ಕಚಿಕ್ಕ ಪ್ರಶ್ನೆಗಳ ಮೂಲಕ ವಿಸ್ತರಿಸಿ ಪ್ರಶಂಸಿಸುವಂತೆ ಮಾಡುವುದು ಅದೇ ರೀತಿ ಪುರಂದರದಾಸ ಕೀರ್ಥನೆಯನ್ನು ,ಕನಕದಾಸರ ಕೀರ್ತನೆಯನ್ನು ಆಡಿಯೋ ಕೇಳಿಸುವುದು ರಾಗಕ್ಕನುಗುಣವಾಗಿ ಹಾಡಿಸುವುದು ಸಾರಾಂಶ ಬರೆಸುವುದು. ಚಿಕ್ಕಚಿಕ್ಕ ಪ್ರಶ್ನೆಗಳ ಮೂಲಕ ವಿಸ್ತರಿಸಿ ಪ್ರಶಂಸಿಸುವಂತೆ ಮಾಡುವುದು. | ಅವಲೋಕನ | ತಪಶೀಲು ಪಟ್ಟಿ | 1) ದಾಸರ ಕೀರ್ತನೆಗಳನ್ನು ಆಸಕ್ತಿಯಿಂದ ಆಲಿಸಿದರೇ ?<br><br>2) ದಾಸರ ಪದಗಳನ್ನು ಸಾಮೂಹಿಕವಾಗಿ ಹಾಡಿದರೇ ?<br><br>3) ಕೀರ್ತನೆಗಳ ಸಾರಾಂಶವನ್ನು ಬರೆದರೇ ?<br><br>4) ಕೀರ್ತನೆಗಳ ಸಾರಾಂಶವನ್ನು ಓದಿದರೇ ?<br><br>5) ಶಿಕ್ಷಕರು ಕೇಳಿದ ಚಿಕ್ಕಚಿಕ್ಕ ಪ್ರಶ್ನೆಗಳಿಗೆ ಉತ್ತರಿಸಿದರೇ |
| | ಮೌಖಿಕ ಅಭಿವ್ಯಕ್ತಿ (ಹಾಡುವುದು) | ಚಟುವಟಿಕೆ:<br><br>ದಾಸರ ಪದಗಳನ್ನು ರಾಗ,ತಾಳಗಕ್ಕನುಗುಣವಾಗಿ ಹಾಡುವುದು. | ವೀಕ್ಷಣೆ | ದರ್ಜಾಮಾಪನಿ | 1) ಅತ್ಯುತ್ತಮ-5<br>2) ಉತ್ತಮ-3<br>3) ಭಾಗವಹಿಸುವಿಕೆ-2 |

ಪಾಠದ ಶೀರ್ಷಿಕೆ : ಅಜ್ಜಯ್ಯನ ಅಭ್ಯಂಜನ (ಗದ್ಯ)

ಬೋಧನೆಯ ಉದ್ದೇಶಗಳು: 1) ಪ್ರಬಂಧಸಾಹಿತ್ಯದ ಬಗ್ಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸುವುದು .
2) ವೈಜ್ಞಾನಿಕವಾಗಿ ಅಭ್ಯಂಜನದ ಮಹತ್ವವನ್ನು ತಿಳಿಸುವುದು.

ಕಲಿಕಾ ಸಾಮಗ್ರಿಗಳು : ಕನ್ನಡದ ರಾಷ್ಟ್ರಕವಿಗಳ ಭಾವಚಿತ್ರಗಳು, ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರ ಭಾವಚಿತ್ರಗಳು ಕುವೆಂಪುರವರ ಕೆಲವು ಗ್ರಂಥಗಳು ,ಅಭ್ಯಂಜನದ ಚಿತ್ರಗಳು ಪ್ರಬಂಧಗಳ ಪುಸ್ತಕಗಳು

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಮಾತನಾಡುವುದು ಬರವಣಿಗೆ | ಪ್ರೇರಣಾ ಚಟುವಟಿಕೆ:<br>ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರ ಹೆಸರನ್ನು ಬರೆಸುವುದು ವಿದ್ಯಾರ್ಥಿಗಳಿಗೆ ಕನ್ನಡದ ರಾಷ್ಟ್ರಕವಿಗಳ ಭಾವಚಿತ್ರಗಳನ್ನು ತೋರಿಸುವುದು, ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರ ಭಾವಚಿತ್ರಗಳನ್ನು ತೋರಿಸುತ್ತ ಕುವೆಂಪುರವರ ಸ್ಥಳ,ಕಾಲ,ಕೃತಿಗಳನ್ನು ಕಪ್ಪುಹಲಗೆ ಮೇಲೆ ಬರೆಸುವುದು,ಓದಿಸುವುದು ಆ ಮೂಲಕ ಕುವೆಂಪುರವರನ್ನು ಪರಿಚಯಿಸುವುದು, ಅವರ ಕೆಲವು ಕೃತಿಗಳಗನ್ನು ತೋರಿಸುತ್ತಾ ಪರಿಚಯಿಸುವುದು. | ಅವಲೋಕನ | ತಪಶೀಲು ಪಟ್ಟಿ | 1) ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರ ಹೆಸರನ್ನು ಬರೆದರೇ ?<br>2) ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರಲ್ಲಿ ಕುವೆಂಪುರವರನ್ನು ಗುರುತಿಸಿದರೇ ?<br>3) ಕುವೆಂಪುರವರ ಸ್ಥಳ,ಕಾಲ,ಕೃತಿಗಳನ್ನು ಕಪ್ಪುಹಲಗೆ ಮೇಲೆ ಬರೆದರೇ ?<br>4) ಕುವೆಂಪುರವರ ಸ್ಥಳ,ಕಾಲ,ಕೃತಿಗಳನ್ನು ಕಪ್ಪುಹಲಗೆ ಮೇಲೆ ಬರೆದುದನ್ನು ಓದಿದರೇ? |

| | | | | | |
|---|---|---|---|---|---|
| | ಆಲಿಸುವುದು ಮತ್ತು ಮಾತನಾಡುವುದು ಬರವಣಿಗೆ | ಪಾಠಪ್ರಕ್ರಿಯೆಗಳು<br><br>ಪಾಠವನ್ನು ಗಟ್ಟಿಯಾಗಿ ಸ್ವರಭಾರದೊಂದಿಗೆ ಓದುವುದು, ವಿದ್ಯಾರ್ಥಿಗಳಿಂದ ಗಟ್ಟಿಯಾಗಿ ಓದಿಸುವುದು,ಮೌನವಾಚನ ನೀಡುವುದು, ನಂತರ ಕಥಾನಕ,ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು | ಅವಲೋಕನ | ತಪಶೀಲು ಪಟ್ಟಿ | 1.ಶಿಕ್ಷಕರ ವಾಚನವನ್ನು ವಿದ್ಯಾರ್ಥಿಗಳು ಆಸಕ್ತಿಯಿಂದ ಆಲಿಸಿದರೇ?<br>2.ವಿದ್ಯಾರ್ಥಿಗಳು ಗದ್ಯಭಾಗವನ್ನು ಗಟ್ಟಿಯಾಗಿ ಸ್ವರಭಾರ ದೊಂದಿಗೆ ಓದಿದರೇ?<br>3.ವಿದ್ಯಾರ್ಥಿಗಳು ಆಸಕ್ತಿಯಿಂದ ಮೌನವಾಗಿ ಓದಿದರೇ?<br>4.ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರೇ? |
| | ಬರಹ ಅಭಿವ್ಯಕ್ತಿ | ಚಟುವಟಿಕೆ:<br>ಆಸಕ್ತ ವಿಷಯವೊಂದರ ಪ್ರಬಂಧ ಬರೆಯುವುದು<br>( 10 ರಿಂದ 15 ವಾಕ್ಯಗಳು ) | ಅವಲೋಕನ | ದರ್ಜಾಮಾಪನಿ | 1) ವಿಷಯ ಸಂಗ್ರಹ<br>2) ವಾಕ್ಯರಚನೆ<br>3) ಶುದ್ಧ ಸಂದರ ಬರೆಹ<br>1) ಅತ್ಯತ್ತಮ–5<br>2) ಉತ್ತಮ–3<br>3) ಭಾಗವಹಿಸುವಿಕೆ–2 |

**ಪಾಠದ ಶೀರ್ಷಿಕೆ : ವಾತ್ಸಲ್ಯ (ಪದ್ಯ)**

**ಬೋಧನೆಯ ಉದ್ದೇಶಗಳು:**
1. ನಡುಗನ್ನಡ ಸಾಹಿತ್ಯದ ಪರಿಚಯ ಮತ್ತು ಓದಲು, ಬರೆಯಲು ಕಲಿಸುವುದು.
2. ಗುರಿಸಾಧನೆಯಲ್ಲಿ ಕ್ಲಿಷ್ಟಪರೀಕ್ಷೆಗಳನ್ನು ಎದುರಿಸುವುದನ್ನು ಕಲಿಸುವುದು ಮತ್ತು ಸಹನಾಶಕ್ತಿಯನ್ನು ಬೆಳೆಸುವುದು,
3. ಶ್ರವಣಕುಮಾರನ ಮಾತಾ–ಪಿತೃ ವಾತ್ಸಲ್ಯ –ಭಕ್ತಿಗಳ ಬಗ್ಗೆ ಗೌರವ ಮೂಡಿಸುವುದು.

**ಕಲಿಕಾ ಸಾಮಗ್ರಿಗಳು :** ಕುಮಾರ ವಾಲ್ಮೀಕಿ ಭಾವಚಿತ್ರ ,ಶ್ರವಣಕುಮಾರನ ಕತೆಪುಸ್ತಕ ,ಮಕ್ಕಳ ರಾಮಾಯಣ ಕಥಾಪುಸ್ತಕಗಳು ಶ್ರವಣಕುಮಾರ ತಂದೆ–ತಾಯಿಗಳನ್ನು ತೀರ್ಥಯಾತ್ರೆಗೆ ಕರೆದೊಯ್ಯುತ್ತಿರುವ ಚಿತ್ರ , ಪದ್ಯದ ಗಮಕವಾಚನ ಆಡಿಯೋ

| ಅವಧಿ | ಕೌಶಲಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | ಮಾನಕಗಳು |
|---|---|---|---|---|---|
| | | | ತಂತ್ರಗಳು | ಸಾಧನಗಳು | |
| | ಆಲಿಸುವುದು ಮತ್ತು ಮಾತನಾಡುವುದು ಬರವಣಿಗೆ | ಪ್ರೇರಣಾ ಚಟುವಟಿಕೆ:<br>ಶ್ರವಣಕುಮಾರನ ಕತೆಯನ್ನು ವಿದ್ಯಾರ್ಥಿಗೆ ಹೇಳುವುದು, ನಂತರ ಕುಮಾರವಾಲ್ಮೀಕಿ ಸ್ಥಳ,ಕಾಲ ಕೃತಿಗಳನ್ನು ಕಪ್ಪುಹಲಗೆ ಮೇಲೆ ಬರೆಸಿ ಓದಿಸಿ ಅವರ ಪರಿಚಯ ಮಾಡಿಸುವುದು | ಅವಲೋಕನ | ತಪಶೀಲು ಪಟ್ಟಿ | 1) ಶ್ರವಣಕುಮಾರನ ಕತೆಯನ್ನು ವಿದ್ಯಾರ್ಥಿಗಳು ಆಶಕ್ತಿಯಿಂದ ಆಲಿಸಿದರೇ ?<br>2) ಕತೆ ಆಲಿಸಿದ ನಂತರ ಶಿಕ್ಷಕರ ಪ್ರಶ್ನೆಗಳಿಗೆ ಉತ್ತರಿಸಿದರೇ ?<br>3) ಕತೆಯ ಸಾರಾಂವನ್ನು ಅರ್ಥೈಸಿಕೊಂಡರೇ ?<br>4) ಕುಮಾರವಾಲ್ಮೀಕಿಯ ಸ್ಥಳ,ಕಾಲ ಕೃತಿಗಳನ್ನು ಕಪ್ಪುಹಲಗೆ ಮೇಲೆ ಬರೆದು ಓದಿದಿರೇ ? |

| | | | | | |
|---|---|---|---|---|---|
| | ಆಲಿಸುವುದು ಮತ್ತು ಮಾತನಾಡುವುದು ಬರವಣಿಗೆ | ಪಾಠಪ್ರಕ್ರಿಯೆಗಳು<br><br>ಪದ್ಯಪಾಠವನ್ನು ಗಟ್ಟಿಯಾಗಿ ಸ್ವರಭಾರದೊಂದಿಗೆ ಗಮಕದಲ್ಲಿ ವಾಚನ ಮಾಡುವುದು ಗಮಕವಾಚನದ ಆಡಿಯೋವನ್ನು ಕೇಳಿಸುವುದು ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಗಟ್ಟಿಯಾಗಿ ಓದಿಸುವುದು,ಮೌನವಾಚನ ನೀಡುವುದು, ಹೊಸಪದಗಳ ಅರ್ಥ ಬರೆದು ಸಾರಾಂಶವನ್ನು ಬರೆಯುವಂತೆ ಪ್ರೇರೇಪಿಸುವುದು.ಸಾರಾಂಶವನ್ನು ಓದಿಸುವುದು ನಂತರ ಕಥಾನಕ,ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು | ಅವಲೋಕನ | ತಪಶೀಲು ಪಟ್ಟಿ | 1) ವಿದ್ಯಾರ್ಥಿಗಳು ಗಮಕ ವಾಚನವನ್ನು ಆಸಕ್ತಿಯಿಂದ ಆಲಿಸಿದರೇ ?<br>2) ಪದ್ಯವನ್ನು ಸಾಮೂಹಿಕವಾಗಿ ಹಾಡಿದರೇ ?<br>3) ಪದ್ಯದ ಸಾರಾಂಶವನ್ನು ಬರೆದರೇ ?<br>4) ಪದ್ಯದ ಸಾರಾಂಶವನ್ನು ಓದಿದರೇ ?<br>5) ಮೌಲ್ಯಮಾಪನ ಪ್ರಶ್ನೆಗಳಿಗೆ ಉತ್ತರಿಸಿದರೇ ? |
| | ಲಿಖಿತ ಅಭಿವ್ಯಕ್ತಿ | ಚಟುವಟಿಕೆ:<br>ಪದ್ಯವನ್ನು ಹೊಸಗನ್ನಡದಲ್ಲಿ ಕಥಾರೂಪದಲ್ಲಿ ಬರೆಯಿರಿ | ಅವಲೋಕನ | ದರ್ಜಾಮಾಪನಿ | 1) ಹೊಸಗನ್ನಡಕ್ಕೆ ಪರಿವರ್ತನೆ(ಕಥಾರೂಪ )<br>2) ವಾಕ್ಯರಚನೆ<br>3) ಶುದ್ಧ ಸಂದರ ಬರೆಹ<br>1) ಅತ್ಯುತ್ತಮ-5<br>2) ಉತ್ತಮ-3<br>3) ಭಾಗವಹಿಸುವಿಕೆ-2 |